## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಡೆಯುವ ಭದ್ರತಾ ಠೇವಣಿ ಮೊತ್ತದ ರಿಯಾಯಿತಿ ಕುರಿತು.

ಓದಲಾಗಿದೆ :

1 ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 09 ಪಿಸಿಎಲ್ 2004(1), ದಿನಾಂಕ: 06.08.2005.
2 ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 09 ಪಿಸಿಎಲ್ 2004(1), ದಿನಾಂಕ: 06.08.2005.
3 ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 09 ಪಿಸಿಎಲ್ 2004(1), ದಿನಾಂಕ: 06.08.2005.
4 ಭಾರತ ಸರ್ಕಾರದ ಪತ್ರ ಸಂಖ್ಯೆ:F.9/4/2020-PPD Dated: 12.11.2020.
5 ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ-12/2020, ದಿನಾಂಕ:22.12.2020.
6 ಭಾರತ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:O.M No. 9/4/2020-PPD, Dated:30.12.2021.

**************

**ಪ್ರಸ್ತಾವನೆ:**

ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಹಲವು ವಾಣಿಜ್ಯ ಸಂಘಟನೆಗಳು ಮತ್ತು ಗುತ್ತಿಗೆದಾರರ ಮನವಿಯ ಮೇರೆಗೆ ಮೇಲೆ ಓದಲಾದ (5)ರ ಸರ್ಕಾರದ ಆದೇಶದಲ್ಲಿ ಗುತ್ತಿಗೆದಾರರು ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್‌ಗಳಲ್ಲಿ ಸ್ಪರ್ಧಾತ್ಮಕವಾಗಿ ಭಾಗವಹಿಸಲು ಅನುಕೂಲವಾಗುವಂತೆ ಮತ್ತು ಸರ್ಕಾರಕ್ಕೆ ಸ್ಪರ್ಧಾತ್ಮಕ ದರ ಪಡೆಯುವ ಹಿತದೃಷ್ಟಿಯಿಂದ ಸಾರ್ವಜನಿಕ ಸಂಗ್ರಹಣಾ ಪ್ರಾಧಿಕಾರಗಳಿಂದ ಪಡೆಯಲಾಗುವ EMD, ಭದ್ರತಾ ಠೇವಣಿ (Performance Security) ಮತ್ತು ಹೆಚ್ಚುವರಿ ಭದ್ರತಾ ಠೇವಣಿ (Additional performance Security), ಷರತ್ತುಗಳಲ್ಲಿ ಕೆಲವೊಂದು ರಿಯಾಯಿತಿಗಳನ್ನು ದಿನಾಂಕ: 31.12.2021ರವರೆಗೆ ನೀಡಲಾಗಿರುತ್ತದೆ. ಭಾರತ ಸರ್ಕಾರದ ಮೇಲೆ ಓದಲಾದ (5) ರಲ್ಲಿ ಭದ್ರತಾ ಠೇವಣಿಗೆ ನೀಡಿರುವ ರಿಯಾಯಿತಿಯನ್ನು ದಿನಾಂಕ:31.03.2023ರವರೆಗೆ ಮೇಲೆ ಓದಲಾದ (6) ರಲ್ಲಿನ ಭಾರತ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ವಿಸ್ತರಿಸಲಾಗಿದೆ. ರಾಜ್ಯದಲ್ಲಿನ ಗುತ್ತಿಗೆದಾರರು ಕೇಂದ್ರ ಸರ್ಕಾರದಲ್ಲಿ ಭದ್ರತಾ ಠೇವಣಿ ರಿಯಾಯಿತಿ ಅವಧಿ ವಿಸ್ತರಿಸಿರುವುದನ್ನು ರಾಜ್ಯದಲ್ಲಿಯೂ ಸಹ ವಿಸ್ತರಿಸಲು ಕೋರಿರುತ್ತಾರೆ. ಭಾರತ ಸರ್ಕಾರದಿಂದ ನೀಡಿರುವ ರಿಯಾಯಿತಿ ಮಾದರಿಯಲ್ಲಿಯೇ ರಾಜ್ಯದಲ್ಲಿ ಭದ್ರತಾ ಠೇವಣಿ ಪಡೆಯುವ ಕುರಿತು ರಿಯಾಯಿತಿ ನೀಡಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆಇ 456 ವೆಚ್ಚ-12/2022, ಬೆಂಗಳೂರು, ದಿನಾಂಕ:10-08-2022**

ಸಾರ್ವಜನಿಕ ಸಂಗ್ರಹಣೆ ಕುರಿತಾಗಿ ಮೇಲೆ ಓದಲಾದ (1), (2) ಮತ್ತು (3)ರ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಿರುವ ಮಾದರಿ ಟೆಂಡರ್ ದಾಖಲೆಗಳಲ್ಲಿನ ಭದ್ರತಾ ಠೇವಣಿ (Performance Security) ಷರತ್ತುಗಳಲ್ಲಿ ದಿನಾಂಕ:31-03-2023ರವರೆಗೆ ಮಾತ್ರ ಅನ್ವಯವಾಗುವಂತೆ ಈ ಕೆಳಕಂಡಂತೆ ಮಾರ್ಪಾಡು ಮಾಡಿ ಆದೇಶಿಸಿದೆ.

1. ಭದ್ರತಾ ಠೇವಣಿ (Peformance Security): ಭದ್ರತಾ ಠೇವಣಿ ಮೊತ್ತವನ್ನು ಗುತ್ತಿಗೆ ಮೊತ್ತದ ಶೇ. 5 ರಿಂದ ಶೇ. 3ಕ್ಕೆ ನಿಗದಿಪಡಿಸಲಾಗಿರುತ್ತದೆ. ಸದರಿ ರಿಯಾಯಿತಿಯು ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಒಪ್ಪಂದಗಳಿಗೂ (Existing Contracts) ಮತ್ತು ದಿನಾಂಕ:31-03-2023 ರವರೆಗೆ ಕರೆಯಲಾಗುವ ಟೆಂಡರ್ ಮತ್ತು ಮಾಡಿಕೊಳ್ಳಲಾಗುವ ಒಪ್ಪಂದಗಳಿಗೆ ಅನ್ವಯವಾಗುವುದು. ಆದರೆ ಚಾಲ್ತಿಯಲ್ಲಿರುವ ಒಪ್ಪಂದಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ/Arbitration ನಲ್ಲಿ ಪ್ರಕರಣ/ವಿವಾದವಿದ್ದಲ್ಲಿ ಅಥವಾ ಪ್ರಕರಣ/ವಿವಾದ ಉಂಟಾಗುವ ನಿರೀಕ್ಷೆ ಇದ್ದಲ್ಲಿ ಸದರಿ ರಿಯಾಯಿತಿಯು ಅನ್ವಯವಾಗುವುದಿಲ್ಲ.

2. ಈ ಆದೇಶದಂತೆ ಪಡೆಯಲಾಗುವ ಭದ್ರತಾ ಠೇವಣಿಯು ಆಯಾ ಒಪ್ಪಂದದ ಪೂರ್ಣ ಅವಧಿಗೆ ಅನ್ವಯವಾಗುತ್ತದೆ. ಯಾವುದೇ ಕಾರಣಕ್ಕೂ ದಿನಾಂಕ:31-03-2023ರ ನಂತರ ಪರಿಷ್ಕರಿಸತಕ್ಕದ್ದಲ್ಲ.

3. ಸದರಿ ಆದೇಶವನ್ನು ಪೂರ್ವ ನಿದರ್ಶನವೆಂದು ಪರಿಗಣಿಸತಕ್ಕದ್ದಲ್ಲ.

4. ಒಂದು ವೇಳೆ ಮಾದರಿ ಟೆಂಡರ್ ದಾಖಲೆಗಳಲ್ಲಿ ನಿಗದಿಪಡಿಸಿರುವಂತೆ ಭದ್ರತಾ ಠೇವಣಿಯನ್ನು ಪಡೆಯುವುದು ಅತ್ಯಂತ ಅವಶ್ಯವೆಂದು ಕಂಡುಬಂದ ಸಂದರ್ಭದಲ್ಲಿ ಮಾತ್ರ ಟೆಂಡರ್ ಅಂಗೀಕಾರ ಪ್ರಾಧಿಕಾರದ ಅನುಮೋದನೆ ಪಡೆದು ಕ್ರಮವಹಿಸುವುದು.

5. ಮೇಲಿನ ಮಾರ್ಪಾಡುಗಳು ಎಲ್ಲಾ ಕಾಮಗಾರಿ, ಸರಕು, ಸೇವೆಗಳು ಮತ್ತು ಸಮಾಲೋಚನಾ ಸೇವೆಗಳ ಸಂಗ್ರಹಣೆಗಳಲ್ಲಿ ಸಂದರ್ಭಕ್ಕನುಸಾರವಾಗಿ ಅನ್ವಯವಾಗುತ್ತವೆ.

6. ಈ ಆದೇಶದಲ್ಲಿನ ನಿರ್ದೇಶನಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ 2(d)ರಡಿ ವ್ಯಾಖ್ಯಾನಿಸಲಾದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳಿಗೆ ಅನ್ವಯವಾಗುತ್ತಿದ್ದು, ಈ ಮಾರ್ಪಾಡುಗಳನ್ನು ಸಂಗ್ರಹಣಾ ಪ್ರಾಧಿಕಾರಗಳು ಮಾದರಿ ಟೆಂಡರ್ ದಾಖಲೆಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು.

7. ಉಳಿದಂತೆ ಮಾದರಿ ಟೆಂಡರ್ ದಾಖಲೆಗಳಲ್ಲಿನ ಯಾವುದೇ ಅಂಶಗಳಲ್ಲಿ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಐ.ಎಸ್.ಎನ್.ಪ್ರಸಾದ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು.

...3

ಪ್ರತಿ:

(1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.

(2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು.

(3) ಮಹಾಲೇಖಪಾಲರು (ಎ&ಇ), ಕರ್ನಾಟಕ ಸರ್ಕಾರ, ಬೆಂಗಳೂರು.

(4) ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ / ಕರ್ನಾಟಕ ವಿಧಾನ ಪರಿಷತ್ತು.

(5) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

(6) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

(7) ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.

(8) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.

(9) ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.

(10) ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು.

(11) ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳ ಕಾರ್ಯನಿರ್ವಹಣಾಧಿಕಾರಿಗಳು.

(12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

(13) ಸರ್ಕಾರದ ವಿಶೇಷ ಕಾರ್ಯದರ್ಶಿಗಳು/ಸರ್ಕಾರದ ಅಪರ ಕಾರ್ಯದರ್ಶಿಗಳು/ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.

(14) ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.